ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

**ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ**

# ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 07-01-2023 ರಿಂದ 11-01-2023**

ಸಂ. ಗ್ರಾ.ಕೃ.ಹ.ಸೇ.ಬ/002/2023 ದಿನಾಂಕ: 06.01.2023

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 07-01-2023 ರಿಂದ 11-01-2023 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (07.01.2023) | ದಿನ-2 (08.01.2023) | ದಿನ-3 (09.01.2023) | ದಿನ-4 (10.01.2023) | ದಿನ-5 (11.01.2023) | | |
| ಮಳೆ ಪ್ರಮಾಣ (ಮಿ.ಮೀ.) | 0 | 0 | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°C) | 34 | 34 | 34 | 34 | 34 | 34.7 | 34↓ |
| ಕನಿಷ್ಠ ಉಷ್ಣಾಂಶ (°C) | 22 | 22 | 22 | 22 | 21 | 19.9 | 22↑ |
| ಮೋಡದ ಹೊದಿಕೆ (ಒಕ್ಟಾ) | 1 | 1 | 1 | 1 | 2 | 0 | 1↑ |
| ಗರಿಷ್ಠ ಆರ್ದ್ರತೆ (ಶೇ.) | 80 | 80 | 82 | 82 | 82 | 79.6 | 81↑ |
| ಕನಿಷ್ಠ ಆರ್ದ್ರತೆ (ಶೇ.) | 39 | 37 | 35 | 34 | 35 | 44.8 | 36↓ |
| ಗಾಳಿಯ ವೇಗ (Kmph) | 1 | 1 | 1 | 1 | 1 | 5.2 | 1↓ |
| ಗಾಳಿಯ ದಿಕ್ಕು (°) | 68 | 68 | 68 | 68 | 71 | 234 | 69↓ |
| ಮುನ್ಸೂಚನೆ | DRY | DRY | DRY | DRY | DRY | | |
| ಸಂಭವನೀಯತೆ (%) | 0 | 0 | 0 | 0 | 0 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 12.01.2023 ರಿಂದ 18.01.2023 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ



ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಜಿಲ್ಲೆಯಾದ್ಯಂತ ಹಲವೆಡೆ ಒಣಹವೆ ಮುಂದುವರೆಯುವ ಸಾಧ್ಯತೆ ಇದ್ದು, ಯಾವುದೇ ಮಳೆಯಾಗುವ ಮುನ್ಸೂಚನೆ ಇಲ್ಲ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **34°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **22°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **80%** ರಿಂದ **82%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **34%** ರಿಂದ **39%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **1** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|---|---|---|---|---|
| Rainfall | 3790.4 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3531.2 |
| Rainy days | 110 | 128 | 105 | 127 | 112 | 107 | 119 | 121 | 112 | 123 | 126 | 152 | 118 |

| Realised Rainfall (22th Dec to 28th Dec, 2022) | Rainfall Forecast Map (30th Dec to 01st Jan 2023) | Standardized Precipitation Index Outlook (24.10.2022 to 21.12.2022) | Normalized Difference Vegetation Index |
|---|---|---|---|
|  |  |  |  |

# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| | |
|---|---|
| ಸಾಮಾನ್ಯ ಸಲಹೆ | ➢ ರೈತರು ಮತ್ತು ಸಾರ್ವಜನಿಕರು ಹವಾಮಾನ ಮುನ್ಸೂಚನೆ ಮತ್ತು ಬೆಳೆ ಸಲಹೆಯ ಮಾಹಿತಿ ಪಡೆಯಲು ಮೇಘದೂತ್ ಆ್ಯಪ್‌ನ್ನು ಡೌನ್ಲೋಡ್ ಮಾಡಿಕೊಳ್ಳುವುದು ಹಾಗೂ ಗುಡುಗು ಮತ್ತು ಮಿಂಚಿನ ಮಾಹಿತಿ ತಿಳಿಯಲು ದಾಮಿನಿ ಆ್ಯಪ್ ಅನ್ನು ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. |
| ಅಡಿಕೆ<br>(ಕಳೆ ನಿಯಂತ್ರಣ) | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ಅಡಿಕೆ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ.<br>➢ ಒಣಗಿದ ಹಿಂಗಾರ ಮತ್ತು ರೋಗ/ಕೀಟ ಭಾದೆಗೆ ತುತ್ತಾದ ಅಡಿಕೆ ಕಾಯಿಗಳನ್ನು ಸಂಗ್ರಹಿಸಿ ನಾಶ ಮಾಡುವುದು. |
| ಅಡಿಕೆ<br>(ಎಲೆ ಚುಕ್ಕೆ ರೋಗ) | ಎಲೆ ಚುಕ್ಕೆ ರೋಗ ನಿರ್ವಹಣೆ ಮಾಡಲು ರೈತರು ರೋಗ ಭಾಧಿತ ಎಲೆಗಳಿಗೆ ಹೆಕ್ಸಾಕೊನಾಜೋಲ್ ಅಥವಾ ಪ್ರೆಪಿಕೊನಾಜೋಲ್ ಅಥವಾ ಢೈಫೈನಜೋಲ್ 1ಎಂ.ಎಲ್ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. |
| ತೆಂಗು<br>(ಕಳೆ ನಿರ್ವಹಣೆ) | ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ತೆಂಗಿನ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ. |
| ಬಾಳೆ<br>(ಸಾಮಾನ್ಯ ಸಲಹೆ) | ➢ 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ 10ಗ್ರಾಂ. ಯುರಿಯಾ+10ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+0.5ಕಿ.ಗ್ರಾ. ಹಸಿ ಸಗಣಿಯನ್ನು 100ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| ಕಾಳುಮೆಣಸು<br>(ನೀರು ನಿರ್ವಹಣೆ) | ಬಳ್ಳಿಯ ಗಿಡದ ಬುಡ ಭಾಗವನ್ನು ಒಣಗಿದ ತರಗೆಲೆ ಅಥವಾ ಬೆಳೆಯ ಅವಶೇಷಗಳಿಂದ ಹೊದಿಕೆ ಮಾಡುವುದು.ಇದರಿಂದ ತೇವಾಂಶ ನಷ್ಟವಾಗುವುದನ್ನು ತಪ್ಪಿಸಬಹುದಾಗಿದೆ. ಪ್ರತಿ ದಿನ ಪ್ರತಿ ಗಿಡಕ್ಕೆ 15 ಲೀ. ನೀರನ್ನು ಒದಗಿಸುವುದು ಸೂಕ್ತ. |
| ಮಲ್ಲಿಗೆ<br>(ಎಲೆ ಚುಕ್ಕೆ ರೋಗ) | ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನಾಜೋಲ್1ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| ಗೇರು<br>(ಕಾಂಡ ಕೊರಕ) | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ತಂತಿಯ ಸಹಾಯದಿಂದ ಶುಚಿಗೊಳಿಸಿ ನಂತರ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದನಂತರ 1 ಮಿ.ಲೀ. ಕ್ಲೋರೋಫೈರಿಫಾಸ್ ಅಥವಾ ಮೊನೊಕ್ರೊಟಾಫಾಸ್ ಪೇಸ್ಟ್ ಅನ್ನು ರಂಧ್ರಕ್ಕೆ ಹಚ್ಚುವುದು. ಅಥವಾ ಆ ಭಾಗವನ್ನು ಮರಳು ಮಿಶ್ರಿತ ಕ್ಲೋರೋಫೈರಿಫಾಸ್4ಜಿ. ಅಥವಾ 10ಜಿ. ಹರಳುಗಳಿಂದ ಮುಚ್ಚುವುದು ಸೂಕ್ತ.(1:1 ಪ್ರಮಾಣ) |
| ಗೇರು<br>(ಟೀ ಸೊಳ್ಳೆ) | ಟೀ ಸೊಳ್ಳೆ ನಿರ್ವಹಣೆ ಮಾಡಲು ರೈತರು ಮೊನೊಕ್ರೊಟೋಫಾಸ್ 1.7ಮಿ.ಲೀ/ಲೀ ಅಥವಾ ಲ್ಯಾಮ್ಡಸಯಲೋಥ್ರಿನ್ 0.5ಮಿ.ಲೀ/ಲೀ ಬೆರಸಿ ಸಿಂಪಡಿಸುವುದು. |
| ಕಲ್ಲಂಗಡಿ<br>(ಸಾಮಾನ್ಯ ಸಲಹೆ) | ರೈತರು ಕಲ್ಲಂಗಡಿ ಬಿತ್ತನೆ ಮಾಡಲು ಸೂಕ್ತ ಸಮಯವಾಗಿದೆ. ರೈತರು ಬಿತ್ತನೆ ಮಾಡುವ ಮುನ್ನ ಬೀಜೋಪಚಾರ (ಬ್ಯಾವಿಸ್ಟಿನ್) ಮಾಡಿ ಬಿತ್ತನರ ಮಾಡುವುದು ಸೂಕ್ತ. |

## ಕ್ಷೇತ್ರ ಬೆಳೆಗಳು:

| | |
|---|---|
| ಭತ್ತ<br>(ಬೇಸಾಯ ಸಲಹೆ) | ಭತ್ತ ಕಟಾವಾದ ನಂತರ ಎರಡನೆ ಬೆಳೆಯಾಗಿ ಉಳಿಕೆ ತೇವಾಂಶದಲ್ಲಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಅವಡೆ ಅಥವಾ ಹಸಿರೆಲೆ ಬೀಜದ ಬೆಳೆಗಳನ್ನು ಬಿತ್ತನೆ ಮಾಡಲು ಸೂಕ್ತ ಸಮಯವಾಗಿದೆ. |
| ಶೇಂಗಾ<br>(ಭೂಮಿ ಸಿದ್ಧತೆ) | ➢ ಭತ್ತ ಕಟಾವು ಮಾಡಿದ ನಂತರ ಹಿಂಗಾರಿನಲ್ಲಿ ಎರಡನೆ ಬೆಳೆಯಾಗಿ ಶೇಂಗಾ ಬೆಳೆಯುವ ರೈತರು ಭೂಮಿಯನ್ನು ಪ್ರಾಥಮಿಕ ಉಳುಮೆ ಮಾಡಲು ಸೂಕ್ತ ಸಮಯ<br>➢ ಪ್ರಾಥಮಿಕ ಉಳುಮೆ ಮಾಡಿದ ರೈತರು ದ್ವಿತಿಯ ಉಳುಮೆ ಉಪಕರಣದ ರೋಟೋವೆಟರ್‌ನಿಂದ ಭೂಮಿಯನ್ನು ಹದಮಾಡಿ ತೇವಾಂಶವನ್ನಾಧರಿಸಿ ಬಿತ್ತನೆ ಕಾರ್ಯ ಕೈಗೊಳ್ಳುವುದು ಸೂಕ್ತ. |
| ಶೇಂಗಾ<br>(ಬೀಜೋಪಚಾರ) | ➢ ಶೇಂಗಾ ಬಿತ್ತನೆ ಮಾಡುವ ರೈತರು ಬಿತ್ತನೆಗು ಮುನ್ನ ಜೀವಾಣು ಗೊಬ್ಬರವಾದ ರೈಜೋಬಿಯಂ ಅನ್ನು 1ಕೆ.ಜಿ. ಬೀಜಕ್ಕೆ 10ಗ್ರಾಂನಂತೆ ಮಿಶ್ರಿಸಿ ಬೀಜಕ್ಕೆ ಉಪಚರಿಸಿ 2ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ ಬಿತ್ತನೆ ಕಾರ್ಯ ಕೈಗೊಳ್ಳುವುದು. |
| ಶೇಂಗಾ<br>(ಕಳೆ ನಿರ್ವಹಣೆ) | ➢ ಶೇಂಗಾ ಬಿತ್ತನೆ ಮಾಡಿದ ನಂತರ 3 ದಿವಸಗಳ ಒಳಗೆ ಉದಯಪೂರ್ವ ಕಳೆನಾಶಕವಾದ ಅಲಾಕ್ಲೋರ್ 50ಇ.ಸಿ. ಅನ್ನು 3ಮಿ.ಲೀ ನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಭೂಮಿಗೆ ಸಿಂಪಡಿಸುವುದು. |

**ಜಾನುವಾರು ಸಲಹೆ:**

| | |
|---|---|
| **ಹಸು**<br>**(ಸಾಮಾನ್ಯ ಸಲಹೆ)** | ➢ **ಜಾನುವಾರುಗಳಿಗೆ ಕಾಲುಬಾಯಿ ರೋಗ, ಚಪ್ಪೆರೋಗ, ಕರುಳುಬೇನೆ ರೋಗಗಳ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತ.**<br>➢ **ಆಮ್ಲತೆಯನ್ನು ಸಮತೋಲಿತ ಆಹಾರವನ್ನು ನೀಡುವುದು.**<br>➢ **ಚಳಿ ಮತ್ತು ಶೀತದಿಂದ ರಕ್ಷಣೆ ನೀಡಲು ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟುವುದು.** |

**(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)**

**ಶ್ರೀ. ಪ್ರವೀಣ್ ಕೆ.ಎಮ್,**
**ತಾಂತ್ರಿಕ ಅಧಿಕಾರಿಗಳು,**
**ಜಿ.ಕೆ.ಎಮ್.ಎಸ್–ವಿಭಾಗ,**
**ವ.ಕೃ.ತೋ.ಸಂ.ಕೇ–ಬ್ರಹ್ಮಾವರ.**

**ಡಾ. ಕೆ. ವಿ. ಸುಧೀರ್ ಕಾಮತ್,**
**ನೋಡಲ್ ಅಧಿಕಾರಿಗಳು,**
**ಜಿ.ಕೆ.ಎಮ್.ಎಸ್–ವಿಭಾಗ,**
**ವ.ಕೃ.ತೋ.ಸಂ.ಕೇ–ಬ್ರಹ್ಮಾವರ.**